2001–2002ನೇ ಸಾಲಿನಲ್ಲಿ (ದಿ: 15–05–2001 ರಿಂದ 03–07–2002 ರವರೆಗೆ)	ಶ್ರೀ ವೆಂಕಟರತ್ನಯ್ಯ ಶೆಟ್ಟಿ (ಪ್ರಭಾರ ವಿಶೇಷಾಧಿಕಾರಿ)
2002–2003ನೇ ಸಾಲಿನಲ್ಲಿ (ದಿ: 04–07–2002 ರಿಂದ ಈವರೆಗೆ ಕಾರ್ಯ ನಿರ್ವಹಿಸುತ್ತಿರುತ್ತಾರೆ.)	ಶ್ರೀ ಎ.ಹೆಚ್. ಮದರ್‌ಕಲ್ ವಿಶೇಷಾಧಿಕಾರಿ

ಕಳೆದ 3 ವರ್ಷಗಳಲ್ಲಿ ಕಾರ್ಯ ನಿರ್ವಹಿಸಿದ ಅಧಿಕಾರಿಗಳ ಬಗ್ಗೆ ಹಣ ದುರುಪಯೋಗದ ಆಪಾದನೆಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ತಿರುಮಲದ ಕರ್ನಾಟಕ ರಾಜ್ಯ ಛತ್ರವು ಮಹಾರಾಜರ ಆಳ್ವಿಕೆಯಲ್ಲಿ ಇದ್ದಾಗ ಸರ್ವೆ ನಂ. 636ರಲ್ಲಿ 1.90 ಎಕರೆ ಜಮೀನನ್ನು 24–04–1931 ರಲ್ಲಿ ಖರೀದಿಸಲಾಗಿದೆ. ಸರ್ವೆ ನಂ 637/1ರ 2.35 ಸೆಂಟ್ಸ್ ವಿಸ್ತೀರ್ಣ ಇನಾಂ ಮೇರೆಗೆ ಮಹಾರಾಜರಿಗೆ ನೀಡಲಾಗಿತ್ತು. ಇದರಲ್ಲಿ ಈಗ 4 ಎಕರೆ ಜಮೀನು ನಮ್ಮ ಸ್ವಾಧೀನದಲ್ಲಿರುತ್ತದೆ.

ಇ) ತಿರುಮಲ – ತಿರುಪತಿ ಅಭಿವೃದ್ಧಿಗೆ ಸಂಬಂಧಿಸಿದಂತೆ 0.25 ಸೆಂಟ್ಸ್ ಜಮೀನನ್ನು ರಸ್ತೆ ವಿಸ್ತೀರ್ಣ ಕಾರ್ಯಕ್ಕಾಗಿ ಸರ್ಕಾರದ ಅನುಮತಿ ಮೇರೆಗೆ ಬಿಟ್ಟುಕೊಡಲಾಗಿದೆ.

ಈ) ಕರ್ನಾಟಕ ರಾಜ್ಯ ಛತ್ರದ 1999–2000ನೇ ಸಾಲಿನವರೆಗೆ ಲೆಕ್ಕ ತಪಾಸಣೆ ಆಗಿದ್ದು 2000–2001ನೇ ಸಾಲಿನಿಂದ ಲೆಕ್ಕ ತಪಾಸಣೆ ನಡೆಯಬೇಕಾಗಿರುತ್ತದೆ. ಲೆಕ್ಕ ತಪಾಸಣೆ ನಡೆಸುವಂತೆ ನಿಯಂತ್ರಕರು, ರಾಜ್ಯ ಲೆಕ್ಕ ಪತ್ರ ಇಲಾಖೆರವರನ್ನು ಕೋರಲಾಗಿದೆ. ಲೆಕ್ಕ ಪರಿಶೋಧನೆಯಲ್ಲಿ ಕಂಡು ಬರುವ ಆಡಳಿತಾತ್ಮಕ ಹಾಗೂ ಹಣ ದುರುಪಯೋಗದ ಬಗ್ಗೆ ಆಕ್ಷೇಪಣೆಗಳು ಕಂಡು ಬಂದಲ್ಲಿ ಸಂಬಂಧಿಸಿದವರ ವಿರುದ್ಧ ಸಿ.ಸಿ.ಎ. ನಿಯಮದಡಿ ಶಿಸ್ತು ಕ್ರಮ ಜರುಗಿಸಲಾಗುವುದು.

ಉ) ತಿರುಮಲದಲ್ಲಿ ಹೆಚ್ಚಿನ ಜಮೀನು ಟಿ.ಟಿ.ಡಿ. ಪ್ರಾಧಿಕಾರಕ್ಕೆ ಸಂಬಂಧಿಸಿದ್ದು ಕ್ರಯ – ವಿಕ್ರಯ ನಡೆದಿರುವಂತೆ ಕಂಡುಬರುತ್ತಿಲ್ಲವಾದ್ದರಿಂದ ಇಲ್ಲಿನ ಜಮೀನಿನ ಅಂದಾಜು ಮೌಲ್ಯ ಲಭ್ಯವಿಲ್ಲ.

ರಾಜ್ಯದಲ್ಲಿ ಮಾಹಿತಿ ತಂತ್ರಜ್ಞಾನದ ಬೆಳವಣಿಗೆ

4304(4975) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಮಾಹಿತಿ ತಂತ್ರಜ್ಞಾನ ಬೆಳವಣಿಗೆಗಳನ್ನು ಜನಪ್ರಿಯಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

ಆ) ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಮಾಹಿತಿ ತಂತ್ರಜ್ಞಾನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ನೇಮಕವಾಗಿರುವ ಅಧಿಕಾರಿಗಳು ಯಾರು ;

ಇ) ಹೊರ ದೇಶಗಳಲ್ಲಿರುವಂತೆ ರಾಜ್ಯದಲ್ಲಿಯು ಸಹ ಮಾಹಿತಿ ತಂತ್ರಜ್ಞಾನ ಪ್ರಚಾರ ಅಂದೋಲನವನ್ನು ಜನಪ್ರಿಯಗೊಳಿಸಲು ಏನು ಕ್ರಮ ತೆಗೆದುಕೊಳ್ಳಲಾಗಿದೆ :

ಈ) ಕಳೆದ ಮೂರು ಸಾಲುಗಳಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದಿಂದ ಸರ್ಕಾರ ಗಳಿಸಿರುವ ವಿದೇಶಿ ವಿನಿಮಯ ಎಷ್ಟು ;

ಉ) ಮಕ್ಕಳ ಮಾಹಿತಿ ತಂತ್ರಜ್ಞಾನವನ್ನು ಉದ್ದೀಪನ ಗೊಳಿಸಲು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಡಿ.ಬಿ. ಇನಾಂದರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು) :

ಅ) ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆಗಾಗಿ ಸರ್ಕಾರವು ಸಹಪ್ರಮಾನದ ಮಾಹಿತಿ ತಂತ್ರಜ್ಞಾನ ನೀತಿಯನ್ನು ಜಾರಿಗೆ ತಂದಿದ್ದು ಆ ಮೂಲಕ ಈ ಕೆಳಕಂಡಂತೆ ಕಾರ್ಯಪನ್ನು ಕೈಗೊಂಡಿರುತ್ತದೆ.

1) ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್‌ಗಳ ಸ್ಥಾಪನೆಗೆ ಉತ್ತೇಜನ ನೀಡುವುದು.

2) ರಾಜ್ಯದಾದ್ಯಂತ ವಿಶಾಲ ಬ್ಯಾಂಡ್ ವಿಡ್ತ್ ಸೌಲಭ್ಯದ ಸಂಪರ್ಕ ಜಾಲವನ್ನು ಒಎಫ್‌ಸಿ ಮೂಲಕ ಹರಡಲು ಅನುಕೂಲಕರ ವಾತವರಣದ ನಿರ್ಮಾಣ ಮತ್ತು ಉತ್ತೇಜನ ನೀಡುವುದು.

3) ಸರಳೀಕೃತ ಕಾರ್ಮಿಕ ನೀತಿಯನ್ನು ಜಾರಿಗೆ ತರಲಾಗಿದೆ.

4) ಐಟಿ ಕಂಪನಿಗಳಿಗೆ ಅಂತರ ರಾಷ್ಟ್ರೀಯ ಮಟ್ಟದ ಮೂಲಭೂತ ಸೌಲಭ್ಯಗಳನ್ನು ರಚಿಸಲು ಐಟಿ ಕಾರಿಡಾರ್‌ನ್ನು ಸ್ಥಾಪಿಸುವುದು.

5) ಗ್ರಾಮೀಣ ಕ್ಷೇತ್ರದ ವಿದ್ಯಾವಂತ ಯುವಕ / ಯುವತಿಯರಿಗೆ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ತರಬೇತಿ ನೀಡಲು ಯುವ.ಕಾಂ ಯೋಜನೆಯನ್ನು ಜಾರಿಗೆ ತರಲಾಗಿದೆ.

6) ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಸ್ಥಾಪಿಸಲ್ಪಡುವ ಉದ್ದಿಮೆಗಳಿಗೆ ಹಲವಾರು ರೀತಿಯ ವಿನಾಯಿತಿ ಮತ್ತು ರಿಯಾಯಿತಿಗಳನ್ನು ನೀಡಲಾಗುತ್ತಿದೆ.

7) ಮಾಹಿತಿ ತಂತ್ರಜ್ಞಾನ ಉದಿಮೆಗಳಿಗೆ ಮಾರುಕಟ್ಟೆ ಬೆಂಬಲ ದೊರುಕುವಂತಾಗಿಸಲು ಪ್ರತಿ ವರ್ಷವೂ ನಡೆಯುವ ಅಂತರ ರಾಷ್ಟ್ರೀಯ ಮಟ್ಟದ ಬೆಂಗಳೂರು ಐಟಿ.ಕಾಮ್ ವ್ಯಾಪಾರ ಮೇಳವನ್ನು ಸರಕಾರವು ಬೆಂಬಲಿಸುತ್ತಿದೆ.

ಆ) -- ಇರುವುದಿಲ್ಲ --

ಇ) ಮಾಹಿತಿ ತಂತ್ರಜ್ಞಾನ ಪ್ರಚಾರ ಆಂದೋಲನವನ್ನು ಜನಪ್ರಿಯಗೊಳಿಸಲು ಹೊರ ದೇಶಗಳಲ್ಲಿರುವಂತೆ ರಾಜ್ಯದಲ್ಲಿ ಪ್ರತಿ ವರ್ಷವೂ ನಡೆಯುವ ಬೆಂಗಳೂರು ಐಟಿ ಮೇಳವನ್ನು ಸರಕಾರವು ಬೆಂಬಲಿಸುತ್ತಿದೆ.

ಈ) ಕಳೆದ ಮೂರು ವರ್ಷಗಳಲ್ಲಿ ರಫ್ತು ಮಾಡಲಾಗಿರುವ ಸಾಫ್ಟವೇರ್ ಮೌಲ್ಯಗಳು ಈ ಕೆಳಗಿನಂತಿವೆ.

ವರ್ಷ		ಮೌಲ್ಯ	
2000–01	ರೂ.	7475	ಕೋಟಿ
2000–02	ರೂ.	9903	ಕೋಟಿ
2000–03	ರೂ.	12350	ಕೋಟಿ
	ರೂ.	29.728	ಕೋಟಿ

ಉ) ಮಕ್ಕಳಲ್ಲಿ ಮಾಹಿತಿ ತಂತ್ರಜ್ಞಾನವನ್ನು ಉದ್ದೀಪನಗೊಳಿಸಲು ಪ್ರತಿವರ್ಷ ಗ್ರಾಮೀಣ ರಸಪ್ರಶ್ನೆ ಕಾರ್ಯಕ್ರಮವನ್ನು ಹಾಗೂ Students Internet World ನಡೆಸಲಾಗುತ್ತಿದೆ.